# <u>ನೆಚ್ಚದಿರೀ ಭಾಗ್ಯ ಯಾರಿಗೂ ಸ್ಥಿರವಲ್ಲ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 349.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 228.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 70.
4. **Note:** Lyrics given without highlights are as per Ref. 1. The wordings in Ref. 3 are same as in Ref. 1. Lyrics given in yellow highlights are as per Ref. 3.
5. **Note:** Singer has followed lyrics as in Ref. 1.

ರಾಗ: ಸೌರಾಷ್ಟ್ರ ತಾಳ: ಅಟ

ನೆಚ್ಚದಿರೀ ಭಾಗ್ಯ ಯಾರಿಗೂ ಸ್ಥಿರವಿಲ್ಲ ನಿಶ್ಚಯವೆಚ್ಚರಿಕೆ || ಪ ||
ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ ಮೆಚ್ಚು ಕೇಳೆಚ್ಚರಿಕೆ || ಅಪ ||

ಪೊಡವಿಪನೊಲುಮೆಯ ಕಡು ನೆಚ್ಚಿ ಗರ್ವದಿ ನಡೆಯದಿರೆಚ್ಚರಿಕೆ
ಕೊಡನ ಅಂಧಕ ಪೊತ್ತು ನಡೆವಂತೆ ಅಧಿಕಾರ ಕಡೆಯಲ್ಲಿ ಎಚ್ಚರಿಕೆ
ಕಡು ಚಳಕನು ತಾನೆನುತ್ತ ಪರರ ಅವಘಡಿಸದಿರೆಚ್ಚರಿಕೆ
ಬಡಬಗ್ಗರ ಬಾಯ ಬಡಿದು ಪಾಪದಿ ಹೆಜ್ಜೆ ಇಡಬೇಡ ಎಚ್ಚರಿಕೆ || 1 ||

ದೊರೆ ಎನ್ನ ಬಲವು ಸುಸ್ಥಿರವೆಂದೆಲ್ಲರ ಹಗೆ ತರವಲ್ಲ ಎಚ್ಚರಿಕೆ
ಉರಗನ ಮುತ್ತಿ ಕಟ್ಟಿರುವೆಯು ಕೊರೆದಂತ ತೆರನಪ್ಪುದೆಚ್ಚರಿಕೆ
ಕರವ ಮುಗಿದು ಸಜ್ಜನರಿಗೆ ಶಿರ ಬಾಗಿ ಚರಿಸುತಿರೆಚ್ಚರಿಕೆ
ಸಿರಿಸೊಡರಿಗೆ ಗುರುಹಿರಿಯರ ಅವಮಾನ ಬಿರುಗಾಳಿ ಎಚ್ಚರಿಕೆ || 2 ||

ಲೋಕಾಪವಾದಕೆ ಅಂಜಿ ನಡೆವುದು ವಿವೇಕ ಕೇಳೆಚ್ಚರಿಕೆ
ನಾಕೇಶಗಾದರು ಬಿಡದಪಕೀರ್ತಿ ಪರಾಕು ಕೇಳೆಚ್ಚರಿಕೆ
ಕಾಕು ಜನರ ಚಾಡಿ ನೀ ಕೇಳಿ ಕೋಪೋದ್ರೇಕ ಬೇಡೆಚ್ಚರಿಕೆ

ಭೂಕಾಂತೆ ನಡುನಡುಗುವಳು ನಿಷ್ಠುರವಾದ ವಾಕು ಬೇಡೆಚ್ಚರಿಕೆ || 3 ||

ನಳ ಮಾಂಧಾತರೇನಾದರೆಂಬುದ ನೀ ತಿಳಿದು ನೋಡೆಚ್ಚರಿಕೆ
ಅಳಿವುದು ಕಾಯವು ಉಳಿವುದೊಂದೇ ಕೀರ್ತಿ ಇಳೆಯೊಳಗೆಚ್ಚರಿಕೆ
ಅಳಲಿಸಿ ಪರರನು ಗಳಿಸಿ ತಂದರ್ಥವು ಉಳಿಯದು ಎಚ್ಚರಿಕೆ
ಉಳಿದಲ್ಪ ಕಾಲವು ಧರ್ಮದ ಹಾದಿಯ ಹಳಿಯಬೇಡೆಚ್ಚರಿಕೆ || 4 ||

ಪರಸತಿ ಧನ ಅಪಹರಿಸಲು ಸಿರಿ ಮೊಗದಿರುಹುವಳೆಚ್ಚರಿಕೆ
ನೆರೆ ಛಿದ್ರಕುಂಭದ ನೀರಿನಂತಾಯುಷ್ಯ ಸರಿಯುತಿದೆಚ್ಚರಿಕೆ
ಬರುವ ಹಾನಿವೃದ್ಧಿ ತನ್ನ ಕಾಲವ ಮೀರಲರಿಯದು ಎಚ್ಚರಿಕೆ
ವರದ ಪುರಂದರ ವಿಠಲನ ಚರಣವ ಮರೆಯದಿರೆಚ್ಚರಿಕೆ || 5 ||

**Note:** Lyrics given below are as per Ref. 3 above and are given separately as they are slightly different.

ರಾಗ: ಸೌರಾಷ್ಟ್ರ ತಾಳ: ಅಟ

ನೆಚ್ಚದಿರೀ ಭಾಗ್ಯ ಆರಿಗೂ ಸ್ಥಿರವಲ್ಲ ನೆಚ್ಚದಿರೆಚ್ಚರಿಕೆ
ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕೆ ಮೆಚ್ಚು ಕೇಳೆಚ್ಚರಿಕೆ || ಪ ||

ಪೊಡವಿಪರೊಲುಮೆ ಸುಸ್ಥಿರವೆಂದು ಗರ್ವದಿ ನಡೆಯದಿರೆಚ್ಚರಿಕೆ
ಕೊಡವನಂಧಕ ಪೊತ್ತು ನಡೆವಂತೆ ಅಧಿಕಾರ ಕಡೆಹೊಲ್ಲ ಎಚ್ಚರಿಕೆ
ಕಡು ಚಪಲನು ತಾನೆಂದು ಪರರವಗಡಿಸದಿರೆಚ್ಚರಿಕೆ
ಬಡವರೆಡರ ಲಾಲಿಸದೆ ಮುಂದಕೆ ಹೆಚ್ಚು ಇಡಬೇಡವೆಚ್ಚರಿಕೆ || 1 ||

ದೊರೆಗಳ ಒಲುಮೆಯುಂಟೆಂದೆಲ್ಲರೊಳು ಹಗೆತರವಲ್ಲ ಎಚ್ಚರಿಕೆ
ಉರಗನ ಮುತ್ತಿ ಕಟ್ಟಿರುವೆಯು ಕೊರೆದಂಥ ತೆರನಪ್ಪುದೆಚ್ಚರಿಕೆ
ಗುರುಹಿರಿಯರ ಕಂಡು ಚರಣಕೆ ಶಿರಬಾಗಿ ನಡೆಯುತಿರೆಚ್ಚರಿಕೆ
ಸಿರಿಯೆಂಬ ಸೊಡರಿಗೆ ಮಾನ್ಯರ ಅವಮಾನ ಬಿರುಗಾಳಿ ಎಚ್ಚರಿಕೆ || 2 ||

ಲೋಕಾಪವಾದಕೆ ಅಂಜಿ ನಡೆಯುವುದು ವಿವೇಕ ಕೇಳೆಚ್ಚರಿಕೆ

ನಾಕೇಂದ್ರನಾದರೂ ಬಿಡದಪಕೀರ್ತಿ ಪರಾಕು ಕೇಳೆಚ್ಚರಿಕೆ
ಕಾಕು ಮನುಜರ ಕೊಂಡೆಯ ಕೇಳೀ ಕೋಪದುದ್ರೇಕ ಬೇಡೆಚ್ಚರಿಕೆ
ಭೂಕಾಂತೆ ನಡು - ನಡುಗುವಳು ನಿಷ್ಠುರವಾದ ವಾಕು ಕೇಳೆಚ್ಚರಿಕೆ || 3 ||

ನಳ – ಮಾಂಧಾತರೆಂಬವರೇನಾದರು ತಿಳಿದು ನೋಡೆಚ್ಚರಿಕೆ
ಅಳಿವುದು ಈ ದೇಹ ಉಳಿವೂದೆಂದೇ ಕೀರ್ತಿ ಇಳೆಯೊಳಗೆಚ್ಚರಿಕೆ
ಅಳಲಿಸಿ ಪರರನು ಗಳಿಸಿದಂಥ ಹೊನ್ನು ಉಳಿಯದು ಎಚ್ಚರಿಕೆ
ಉಳಿದಲ್ಪ ಕಾಲದಿ ಬಡವರಾದವರನು ಹಳಿಯದಿರೆಚ್ಚರಿಕೆ || 4 ||

ಪರಸತಿ – ಪರಧನ ಕಳುಪಲು ಸಿರಿಮೊಗದಿರುಹುವಳೆಚ್ಚರಿಕೆ
ನೆರೆ ಛಿದ್ರಕುಂಭದ ನೀರಿನಂತಾಯುಷ್ಯ ಸರಿಯುವುದೆಚ್ಚರಿಕೆ
ಬರುವ ಹಾನಿವೃದ್ಧಿ ತನ್ನ ಕಾಲವ ಮೀರಲರಿಯದು ಎಚ್ಚರಿಕೆ
ವರದ ಪುರಂದರ ವಿಠಲ ರಾಯನ ಮರೆಯದಿರೆಚ್ಚರಿಕೆ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಸಿರಿವಂತಿಕೆ, ಅರಸನ ಪ್ರೀತಿ, ಇವು ಯಾರಿಗೂ ಸ್ಥಿರವಲ್ಲವೆಂಬುದನ್ನು ಹೇಳಿ ದಾಸರು ಇವು ಇದ್ದಾಗಲೂ ಮಾನವನು ಮಾಡಬೇಕಾದುದೇನು? ಎಂಬುದನ್ನು ಈ ಹಾಡಿನಲ್ಲಿ ವಿವರಿಸಿದ್ದಾರೆ.

**ಹೆಚ್ಚು** = ಒಣ ಪ್ರತಿಷ್ಠೆ.

**ಅವಗಡಿಸು** = ಕಾಡು, ಅಪಮಾನಿಸು

**ಪೊಡವಿಪನ ಒಲುಮೆ** – ಅರಸನ ಆದರ.

**ಕೊಡನ ಅಂಧಕ** – ಕುರುಡನು ಕೊಡವನ್ನು.

**ಕಡು ಚಳಕನು** – ತುಂಬ ಬುದ್ಧಿಶಾಲಿಯೆಂದು.

**ಸೊಡರು** = ದೀಪ

**ಸಿರಿಯೆಂಬ ಸೊಡರಿಗೆ...** – ಐಶ್ವರ್ಯವೆಂಬ ದೀಪವನ್ನು ಆರಿಸುವ ಬಿರುಗಾಳಿ ಸಜ್ಜನರನ್ನು ಅವಮಾನಪಡಿಸುವುದೇ.

**ನಾಕೇಶ** – ಇಂದ್ರ. **ನಾಕೇಂದ್ರ** = ದೇವೇಂದ್ರ (ಇಂದ್ರ)

**ಕಾಕುಜನ** – ಕೆಟ್ಟವರು.

**ಅಳಲಿಸಿ ಪರರನು** – ಬೇರೆಯವರನ್ನು ತೊಂದರೆಪಡಿಸಿ.

**ಸಿರಿ ಮೊಗದಿರುಹುವಳು** – ಐಶ್ವರ್ಯದೇವತೆಯು ಮುಖತಿರುಗಿಸಿಕೊಂಡು ಹೊರಟು ಹೋಗುವಳು.

**ನೆರೆ ಛಿದ್ರಕುಂಭದ** – ತುಂಬ ತೂತುಗಳಿರುವ ಮಡಕೆಯಲ್ಲಿರುವ.

**ಮಾಂಧಾತ** = ಸೂರ್ಯ ಕುಲದ ಯುವನಾಶ್ವನ ಮಗ. ಯುವನಾಶ್ವನಿಗೆ ಅನೇಕ ಜನ ಹೆಂಡರಿದ್ದರೂ ಯಾರಲ್ಲಿಯೂ ಮಕ್ಕಳಾಗಿರಲಿಲ್ಲ. ಭೃಗು ಋಷಿಯಿಂದ ಪುತ್ರಕಾಮೇಷ್ಟಿಯನ್ನು ಮಾಡಿಸಿದನು. ಪುತ್ರಪ್ರದವಾದ ಮಂತ್ರಗಳಿಂದ ಅಭಿಮಂತ್ರಿತವಾದ ಉದಕವನ್ನು ಇಟ್ಟಿದ್ದರು. ನೀರಡಿಸಿ ಯುವನಾಶ್ವನು ನೀರು ಕುಡಿಯಲು ಗರ್ಭ ನಿಂತಿತು. ಋಷಿಗಳು ಇವನ ಹೊಟ್ಟೆಯನ್ನು ಸೀಳಿ ಕೂಸನ್ನು ತೆಗೆದರು. ಇಂದ್ರನ ಕಿರುಬೆಳನ್ನು ಚೀಪಿ ಬೆಳೆದವನಾದ್ದರಿಂದ ಇವನಿಗೆ ಮಾಂಧಾತ (ಧಾಸ್ = ಚೀಪು) ನೆಂಬ ಹೆಸರು ಬಂದಿತು. ಇವನಿಗೆ ಇಂದ್ರನ ಅರ್ಧಾಸನವನ್ನು ಗೆಲ್ಲಬೇಕೆಂಬ ಅಹಂಕಾರ ಹುಟ್ಟಿ ಸ್ವರ್ಗದ ಮೇಲೆ ದಂಡೆತ್ತಿಹೋದನು. ಇಂದ್ರನು ಇವನನ್ನು ಲವಣಾಸುರನನ್ನು ಜಯಿಸಲಿಕ್ಕೆ ಹೇಳಲು, ಅವನೊಡನೆ ಯುದ್ಧಮಾಡಿ ಸತ್ತನು. (ಭಾರ.ವನ.೧೨೭ ವಾಯು. ಪು. ೨-೨೯-೧೫೪) ಇವನಿಗೆ ಪುರುಕುತ್ಸ, ಅಂಬರೀಷ, ಮುಚುಕುಂದರೆಂಬ ಮಕ್ಕಳಿದ್ದರು.

**Classification:** Keertane
**Ankita:** varada purandara vittala
**Location:** NA
**Category:** Loka Neeti
**Sub-Category:** Bhagya, loka, kaadu, olume, garva, badava, bayi, papa, arasa, shatru, uraga, iruve, kai, jana, deepa, apamana, bhaya, indra, keerti, sittu, bhumi, deha, dharma, daari, patni, rokka, bangara, niru,
**Pravachana:** NA
**Explanation:** Dr. A. B. Shamachar, Bengaluru.